ಇ) ಈ ನೇಮಕಾತಿಗೆ ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳಲ್ಲಿ ಅವಕಾಶವಿರುವುದರಿಂದ ಇದು ನಿಯಮಬಾಹಿರವಲ್ಲ. ಆದ್ದರಿಂದ ಇದನ್ನು ಸರಿಪಡಿಸುವ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕಾದ ಅವಶ್ಯಕತೆ ಕಂಡು ಬರುವುದಿಲ್ಲ.

ಈ) ಮತ್ತು ಉ) ಕಳೆದ ಒಂದು ವರ್ಷದಿಂದ ಖಾಲಿ ಇದ್ದು ಇವುಗಳಿಗೆ ಮುಂಬಡ್ತಿ ನೀಡಲು ಈಗಾಗಲೇ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

5270(5811) ಶ್ರೀ ಕಟ್ಟಾಸುಬ್ರಹ್ಮಣ್ಯನಾಯ್ಡು (ಶಿವಾಜಿನಗರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿನ ನ್ಯಾಯಾಲಯಗಳ ಅವರಣಗಳಲ್ಲಿ ದಾಖಲೆ ಪತ್ರಗಳು (ಡಾಕ್ಯುಮೆಂಟ್ ಪೇಪರ್) ಕಾಳಸಂತೆಯಲ್ಲಿ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಇದನ್ನು ತಡೆಗಟ್ಟಲು ಕೈಗೊಂಡ ಕ್ರಮವೇನು?

ಇ) ಬೆಂಗಳೂರು ನಗರದಲ್ಲಿ ನಕಲಿ ದಾಖಲೆ ಪತ್ರಗಳು ಮಾರಾಟವಾಗುತ್ತಿರುವುದು ನಿಜವೇ?

ಈ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಬಂದಿರುವುದಿಲ್ಲ. ಛಾಪಾ ಕಾಗದ ಮತ್ತು ಎಲ್ಲಾ ತರಹೆಯ ಸ್ಟ್ಯಾಂಪ್‌ಗಳ ಬಳಕೆಯನ್ನು ದಿನಾಂಕ: 01-04-2003ರಿಂದ ರಾಜ್ಯದ್ಯಾಂತ ಸ್ಥಗಿತ ಗೊಳಿಸಲಾಗಿದೆ. ನೋಂದಣಿ ಕಡ್ಡಾಯವಾಗಿರುವ ಪತ್ರಗಳನ್ನು ಬಿಳಿ ಹಾಳೆ ಅಥವಾ ಸರ್ಕಾರದ ಅನುಮತಿಯಿಂದ ಬಿಡುಗಡೆ ಮಾಡಲಾದ ರೂ.2ರ ಪತ್ರದ ಹಾಳೆಯಲ್ಲಿ ಪತ್ರ ಬರೆದು ಪೂರ್ಣ ಮುದ್ರಾಂಕ ಶುಲ್ಕ ಡಿಮ್ಯಾಂಡ್ ಡ್ರಾಫ್ಟ್/ಪೇ ಆರ್ಡರ್/ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ರಸೀತಿ ಮೂಲಕ ಪಾವತಿಸಿ ಪತ್ರಗಳನ್ನು ನೋಂದಾಯಿಸಲಾಗುತ್ತಿದೆ.

ಐಚ್ಛಿಕ ನೋಂದಣಿ ಪತ್ರಗಳನ್ನು ಬರೆದುಕೊಳ್ಳಲು ಸ್ಟೇಟ್ ಬ್ಯಾಂಕ್ ಮೈಸೂರ್‌ನಿಂದ pre certified document sheets ಗಳನ್ನು ಬಿಡುಗಡೆಗೊಳಿಸಲಾಗಿದೆ. ಈ ಡಾಕ್ಯುಮೆಂಟ್ ಷೀಟ್‌ಗಳನ್ನು ರಾಜ್ಯಾದ್ಯಂತ ಸ್ಟೇಟ್ ಬ್ಯಾಂಕ್ ಮೈಸೂರ್‌ನ 211 ಶಾಖೆಗಳಿಂದಲೂ ಸಾರ್ವಜನಿಕರಿಗೆ ಒದಗಿಸಲಾಗುತ್ತಿದೆ. ಬೆಂಗಳೂರು ನಗರದಕಲ್ಲಿರುವ 53 ಶಾಖೆಗಳಿಂದಲೂ ಸಾರ್ವಜನಿಕರಿಗೆ ಈ ಷೀಟುಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಆದ್ದರಿಂದ ಖಾಲಿ ಹಾಳೆಗಳಿಗೆ ಮುದ್ರಾಂಕಿಸುವ ವ್ಯವಸ್ಥೆ ಜಾರಿಯಲ್ಲಿರುವುದಿಲ್ಲ.

ಆ) ಹಾಲಿ ಸ್ಟ್ಯಾಂಪ್‌ವೆಂಡರ್‌ಗಳು ಅಸ್ತಿತ್ವದಲ್ಲಿರುವುದಿಲ್ಲ. ಉಪ ನೋಂದಣಿ ಕಛೇರಿಯಲ್ಲಿ Printed or Lithographed ನಮೂನೆಗಳನ್ನು ಫ್ರಾಂಕ್ ಮಾಡಲಾಗುತ್ತಿದೆ. ಈ ವ್ಯವಸ್ಥೆಯು ರಾಜ್ಯದಲ್ಲಿರುವ ಎಲ್ಲಾ ಉಪ ನೋಂದಣಿ ಕಛೇರಿಗಳಲ್ಲಿ ಜಾರಿಯಲ್ಲಿರುತ್ತದೆ. ಆದ್ದರಿಂದ ಖಾಲಿ ಹಾಳೆಗಳಿಗೆ ಮುದ್ರಾಂಕಿಸುವ ವ್ಯವಸ್ಥೆ ಜಾರಿಯಲ್ಲಿರುವುದಿಲ್ಲ.

ಸ್ಟೇಟ್ ಬ್ಯಾಂಕ್ ಆಫ್ ಮೈಸೂರುನಿಂದ ನೀಡಲಾಗುತ್ತಿರುವ ಡಾಕ್ಯುಮೆಂಟ್ ಷೀಟ್‌ಗಳಲ್ಲಿ ಕಡ್ಡಾಯವಾಗಿ ಹೆಸರು ಮತ್ತು ವಿಳಾಸವನ್ನು ಬರೆದು ನೀಡಲಾಗುತ್ತಿದೆ. ಈ ಎರಡು ಪ್ರಕ್ರಿಯೆಯಲ್ಲಿ ಹಣ ಪಡೆದುದ್ದಕ್ಕಾಗಿ ರಸೀತಿ ನೀಡಲಾಗುತ್ತಿದೆ.

ಇ) ಛಾಪಾ ಕಾಗದ ಬಳಕೆ ಸ್ಥಗಿತಗೊಳಿಸಿದ ಮೇಲೆ ಸ್ಟ್ಯಾಂಪ್‌ವೆಂಡರುಗಳು ಈಗ ಅಸ್ತಿತ್ವದಲ್ಲಿರುವುದಿಲ್ಲ. ಕೆಲವರು ಅರ್ಜಿಗಳ ನಮೂನೆ ಮತ್ತು ಫಾರಂಗಳಲ್ಲಿ ಪ್ರಿಂಟ್ ಮಾಡಿ ತಾಲ್ಲೂಕು ಕಛೇರಿ ಮತ್ತು ನ್ಯಾಯಾಲಯ ಆವರಣಗಳಲ್ಲಿ ಮಾರುತ್ತಿರುತ್ತಾರೆ. ಇವರು ಎಲ್ಲಾ ತರಹೆಯ ಅರ್ಜಿಗಳನ್ನು ಮಾರಾಟ ಮಾಡುತ್ತಿರುತ್ತಾರೆ.

ಈ) ಅವ್ಯವಹಾರಗಳ ಬಗ್ಗೆ ದೂರುಗಳು ಬಂದಲ್ಲಿ ಕಾನೂನು ರೀತಿಯು ಕ್ರಮ ಕೈಗೊಳ್ಳಲಾಗುವುದು.

5271(6183) ಶ್ರೀ ಕಿರಣ್ ಕುಮಾರ್ ಕೆ.ಎಸ್ (ಕಳ್ಳಂಬೆಳ್ಳ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿರಾ ತಾಲ್ಲೂಕು ಚಿಕ್ಕನಹಳ್ಳಿಯ ಸರ್ಕಾರಿ ಎಸ್.ಕೆ.ವಿ.ಡಿ ಹೈಸ್ಕೂಲ್‌ನ ಹೆಸರಿನಲ್ಲಿದ್ದ (ಹೊಸ ಸರ್ವೆ.ನಂ.302)ರ 5.10 ಗುಂಟೆ ಪ್ರದೇಶದ ಜಮೀನನ್ನು ಶ್ರೀ ಉದ್ರೇಗೌಡರು 1905ರಲ್ಲಿ ಸರ್ಕಾರಿ ಆದೇಶದ ಪ್ರಕಾರ ಸಂತೆನಡೆಸಲು ದಾನ ಮಾಡಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ಸರ್ವೆನಂಬರಿನ ಪೂರ್ಣ ಜಮೀನನ್ನು ಚಿಕ್ಕನಹಳ್ಳಿಯ ದಿವಂಗತ ಶ್ರೀ ಶಂಕರಪ್ಪನವರ ಮಕ್ಕಳು 1989ರಲ್ಲಿ ಅಕ್ರಮವಾಗಿ ತಮ್ಮ ಹೆಸರಿಗೆ ರಿಜಿಸ್ಟರ್ ಮಾಡಿಕೊಂಡಾಗ ಈ ಜಮೀನಿನ ಮಧ್ಯ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದುಹೋಗಿದ್ದು ಇನ್ನುಳಿದ ಜಮೀನಿನಲ್ಲಿ ಶಾಲೆಯ ಕಟ್ಟಡಗಳು ಇದ್ದ ಪ್ರಯುಕ್ತ ಹಕ್ಕು ಬದಲಾವಣೆ ರದ್ದಾಗಿದ್ದು ಮತ್ತೆ 1994ರಲ್ಲಿ ಅದೇ ಕಂದಾಯ ಇಲಾಖೆಯವರು ರದ್ದಾಗಿದ್ದ ಹಕ್ಕು ಬದಲಾವಣೆಯನ್ನು ಅಕ್ರಮವಾಗಿ ಅಂಗೀಕರಿಸಿ ಪರಭಾರೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) 2004ರಲ್ಲಿ ರಾಷ್ಟ್ರೀಯ ಹೆದ್ದಾರಿ ವಿಸ್ತರಣೆ ಸಮಯದಲ್ಲಿ ಅದೇ ಶಂಕರಪ್ಪನವರ ಮಕ್ಕಳು ಸರ್ವೆ ನಂ. 302ರಲ್ಲಿ ದುರಸ್ಥಿಯಾಗಿಲ್ಲದಿದ್ದರೂ ಅಕ್ರಮವಾಗಿ 202:ಸಿ ಎಂದು ಸುಳ್ಳುದಾಖಲೆ ಸೃಷ್ಟಿಸಿ ಪರಿಹಾರ ಧನವನ್ನು ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ಸದರಿ ದಾನದ ಜಮೀನನ್ನು ಶಾಲೆಯ ವಶಕ್ಕೆ ಬಿಡಿಸಿಕೊಟ್ಟು, ಸುಳ್ಳು ದಾಖಲೆ ಸೃಷ್ಟಿ ಮಾಡಿದವರ ಮೇಲೆ ಕ್ರಮಕ್ಕೈಗೊಳ್ಳುವುದೇ?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ಇಲ್ಲ

ಆ) ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಇ)ಮತ್ತುಈ) ಸ.ನಂ.202ನೇದ್ದು ಹಾಲಿ ಸ.ನಂ. 202 ಎಂದೇ ನಮೂದಾಗಿದ್ದು 202ಸಿ ಎಂಬುದಾಗಿ ಬದಲಾವಣೆಗೊಂಡಿರುವ ಬಗ್ಗೆ ದಾಖಲೆಗಳು ಇರುವುದಿಲ್ಲ; ಹಾಗೂ ಪ್ರಸಕ್ತ ಸರ್ವೆ ನಂ. 202ಎಂಬುದಾಗಿಯೇ ದಾಖಲೆಗಳು ಮುಂದುವರಿಯುತ್ತಿದೆ.

ಸ.ನಂ. 202ನ್ನು 202ಸಿ ಎಂದು ತಿದ್ದಿ ಸುಳ್ಳು ದಾಖಲೆ ಸೃಷ್ಟಿಸಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಹಾಲಿ ಸ.ನಂ. 202ರಲ್ಲಿ ಆರ್ ಟಿ ಸಿ ಯಲ್ಲಿ ಎಸ್.ಕೆ.ವಿ.ಡಿ ಶಾಲೆಗೆ 0.10 ಗುಂಟೆ ಎಂದು ಕಾಲಂ 12(2)ರಲ್ಲಿ ನಮೂದು ಬಂದಿರುತ್ತೆ ಶಾಲೆಗೆ ಈ ಸರ್ವೆ ನಂ.ನಲ್ಲಿ ಇನ್ನೂ ಹೆಚ್ಚಿನ ವಿಸ್ತೀರ್ಣ ಇದೆಯೇ ಎಂಬ ಬಗ್ಗೆ ಹಾಗೂ ಅವರು ಉಲ್ಲೇಖಿಸಿರುವ ದಾನಪತ್ರ ಮತ್ತು ಸರ್ಕಾರದ ಆದೇಶದ ಬಗ್ಗೆ ತಿಳಿಯಲು ಸಂಬಂದಪಟ್ಟ ಉಬಯ ಪಾರ್ಟಿಗಳಿಂದ ದಾಖಲೆಗಳನ್ನು ಪಡೆದು ವಿಚಾರಣೆ ನಡೆಸಿ ನಿರ್ಣಯಿಸಬೇಕಾಗಿದೆ.